ವಿಶ್ವವಾಣಿ
ವಿಶ್ವಾಸವೇ ವಿಶ್ವ

**Sunday 20th January 2019**

## A Workshop about "usage of free software". RVCE

# ಉಚಿತ ತಂತ್ರಾಂಶ ಬಳಕೆ ಕುರಿತು ಜಾಗೃತಿ ಕಾರ್ಯಾಗಾರ




ಉಚಿತ ತಂತ್ರಾಂಶ ಬಳಕೆ ಕುರಿತು ಅರಿವು ಹಾಗೂ ಜಾಗೃತಿ ಮೂಡಿಸಲು ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಜಿಎನ್‌ಯು ಪ್ರಾಜೆಕ್ಟ್ ಹಾಗೂ ಉಚಿತ ತತ್ರಾಂಶ ಫೌಂಡೇಷನ್ ಮುಖ್ಯಸ್ಥ ಡಾ. ರಿಚರ್ಡ್ ಸ್ಟಾಲ್ಮನ್, ರಾಷ್ಟ್ರೀಯ ಶಿಕ್ಷಣ ಸೇವಾ ಸಮಿತಿ ಟ್ರಸ್ಟ್ ಸಹ ಕಾರ್ಯದರ್ಶಿ ಡಿ.ಪಿ.ನಾಗರಾಜ್, ಆರ್.ವಿ.ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಸುಬ್ರಮಣ್ಯ ಇದ್ದರು.

**ಬೆಂಗಳೂರು:** ಕಂಪ್ಯೂಟರ್‌ನಲ್ಲಿ ಬಳಸುತ್ತಿರುವ ತಂತ್ರಾಂಶಗಳು ಮನುಷ್ಯರನ್ನು ನಿಯಂತ್ರಿಸುತ್ತಿವೆಯೋ ಅಥವಾ ಅವುಗಳು ನಮ್ಮ ನಿಯಂತ್ರಣದಲ್ಲಿವೆಯೋ ಎಂಬುದು ತಿಳಿಯದಂತಾಗಿದೆ ಎಂದು ಜಿಎನ್‌ಯು ಪ್ರಾಜೆಕ್ಟ್ ಹಾಗೂ ಉಚಿತ ತಂತ್ರಾಂಶ ಫೌಂಡೇಷನ್ ಮುಖ್ಯಸ್ಥ ಡಾ. ರಿಚರ್ಡ್ ಸ್ಟಾಲ್ಮನ್ ತಿಳಿಸಿದರು. ಮೈಸೂರು ರಸ್ತೆಯ ಆರ್.ವಿ.ತಾಂತ್ರಿಕ ಮಹಾವಿದ್ಯಾಲಯದಲ್ಲಿ ಫ್ರೀ ಸಾಫ್ಟ್‌ವೇರ್ ಫೌಂಡೇಷನ್ ಆಪ್ ಇಂಡಿಯಾ ಸಂಸ್ಥೆಯಿಂದ ಶನಿವಾರ ಉಚಿತ ತಂತ್ರಾಂಶ ಬಳಕೆ ಕುರಿತು ಅರಿವು ಹಾಗೂ ಜಾಗೃತಿ ಮೂಡಿಸಲು ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ನಾವು ಬಳಸುತ್ತಿರುವ ಕಂಪ್ಯೂಟರ್ ತಂತ್ರಾಂಶಗಳು ನಮ್ಮನ್ನು ನಿಯಂತ್ರಿಸಿ ನಮ್ಮ ಖಾಸಗಿ ವಿಚಾರಗಳನ್ನು ಸಂಗ್ರಹಿಸುವ ಮೂಲಕ ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಂಡಿವೆ. ಕಂಪ್ಯೂಟರ್ ಬಳಕೆದಾರರು, ತಂತ್ರಜ್ಞರು, ಶಿಕ್ಷಕರು ಹಾಗೂ ಸರಕಾರದ ಆಡಳಿತಾಧಿಕಾರಿಗಳು ಉಚಿತ ತತ್ರಾಂಶದ ಉಪಯೋಗಗಳನ್ನು ಮನನ ಮಾಡಿಕೊಂಡು ಅರಿವು ಮೂಡಿಸಿಕೊಳ್ಳುವ ಮೂಲಕ ದೈನಂದಿನ ಚಟುವಟಿಕೆ ಹಾಗೂ ವ್ಯವಹಾರಗಳಲ್ಲಿ ಬಳಕೆ ಮಾಡಿಕೊಳ್ಳಬಹುದಾಗಿದೆ ಎಂದರು.